ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
**KARNATAKA LEGISLATIVE ASSEMBLY RESEARCH AND REFERENCE BRANCH**

ಪತ್ರಿಕಾ ತುಣುಕುಗಳು
**PAPER CLIPPINGS**

ಇಲಾಖೆ / ವಿಷಯ : DEPARTMENT / SUBJECT: ಕೋರ್ಟ್ ವಾರ್ತೆ

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯ ಕರ್ನಾಟಕ ದಿನಾಂಕ : DATE : 26/09/2019

## ಸುಪ್ರೀಂಕೋರ್ಟ್‌ನಲ್ಲಿ ಮುಂದುವರಿದ ಅನರ್ಹರ ಅರ್ಜಿ ವಿಚಾರಣೆ

# ನಾಮಪತ್ರ ಸವಾಲ್

■ **ವಿಕ ಸುದ್ದಿಲೋಕ** ಹೊಸದಿಲ್ಲಿ/ಬೆಂಗಳೂರು

ಸುಪ್ರೀಂಕೋರ್ಟ್‌ನಲ್ಲಿ ಬಿರುಸಿನ ವಾದ-ವಿವಾದ ಮುಂದುವರಿದಿರುವಂತೆಯೇ, ಅನರ್ಹ ಶಾಸಕರಿಗೆ ನಾಮಪತ್ರ ಸವಾಲ್ ಎದುರಾಗಿದೆ. ಚುನಾವಣೆ ಮುಂದೂಡಬೇಕು ಅಥವಾ ಸ್ಪರ್ಧೆಗೆ ಅವಕಾಶ ಕೊಡಬೇಕು ಎಂಬ ಅನರ್ಹ ಶಾಸಕರ ಕೋರಿಕೆ ಕುರಿತ ವಿಚಾರಣೆಯನ್ನು ಸುಪ್ರೀಂ ಕೋರ್ಟ್ ಗುರುವಾರಕ್ಕೆ ಮುಂದೂಡಿದೆ. ಶುಕ್ರವಾರವೂ ಅಂತಿಮ ನಿರ್ಣಯ ಬರದೆ ಆದೇಶ ಸೋಮವಾರಕ್ಕೆ ಮುಂದೂಡಿಕೆಯಾದರೆ ಅನರ್ಹರಿಗೆ ಟ್ರಬಲ್ ಖಚಿತ!

ಸಮರ

ಸುಪ್ರೀಂಕೋರ್ಟ್ ಗುರುವಾರ ತಮಗೆ ಮಧ್ಯಂತರ ಪರಿಹಾರ ಕೊಡಲಿದೆ. ಭಾನುವಾರ ಬೆಂಗಳೂರಿನಲ್ಲಿರುವ ಬಿಜೆಪಿ ಪ್ರಧಾನ ಕಚೇರಿಗೆ ತೆರಳಿ ಪಕ್ಷದ ಸದಸ್ಯತ್ವ ಪಡೆದು ಬಿ ಫಾರಂ ಸ್ವೀಕರಿಸುತ್ತೇವೆ. ಸೋಮವಾರ ಬೆಳಗ್ಗೆ ನಾಮಪತ್ರ ಸಲ್ಲಿಸುತ್ತೇವೆ ಎನ್ನುವುದು ಅನರ್ಹ ಶಾಸಕರ ಸದ್ಯದ ಲೆಕ್ಕಾಚಾರ. ಆದರೆ ಶನಿವಾರ, ಭಾನುವಾರ ಕೋರ್ಟ್‌ಗೆ ರಜೆ. ಹಾಗಾಗಿ ಅಂತಿಮ ಆದೇಶವನ್ನು ನ್ಯಾಯಾಲಯ ಸೋಮವಾರಕ್ಕೆ ಕಾದಿರಿಸಿದರೆ ಬಂಡಾಯ ಶಾಸಕರಿಗೆ ಟೆನ್ಶನ್ ಏರಲಿದೆ. ಸೋಮವಾರ ಮಧ್ಯಾಹ್ನ 3 ಗಂಟೆಯೊಳಗೆ ಬಿ ಫಾರಂ ಸಹಿತ ನಾಮಪತ್ರ ಸಲ್ಲಿಸಬೇಕಾಗುತ್ತದೆ. ಹಾಗಾಗಿ ಬಿಜೆಪಿ ಮತ್ತು ಅದನ್ನು ನಂಬಿಕೊಂಡು ಬಂದಿರುವ ಪಕ್ಷಾಂತರಿಗಳಿಗೆ ಕೊನೆಯ ಕ್ಷಣದಲ್ಲಿ ಒತ್ತಡ ಎದುರಾಗಲಿದೆ. ಪಕ್ಷದ ಅಭ್ಯರ್ಥಿಗಳೇ ಕಣದಲ್ಲಿ ಇಲ್ಲದಿರುವ ಆತಂಕವೂ ಎದುರಾಗಬಹುದು. ಪಕ್ಷದ ಮೂಲ ಕಾರ್ಯಕರ್ತರ ವಿರೋಧ, ಪ್ರತಿಭಟನೆಯ ನಡುವೆಯೇ, ಯಾರನ್ನು ಕಣಕ್ಕಿಳಿಸಬೇಕು ಎಂಬ ಗೊಂದಲ ಉಂಟಾಗಬಹುದು.



**ಉಪಸಮರ**
ಅಭ್ಯರ್ಥಿಗಳ ಆಯ್ಕೆಗೆ ಮೂರೂ ಪಕ್ಷಗಳಲ್ಲಿ ಭಾರಿ ಕಸರತ್ತು
»04



ಸ್ವಯಂಪ್ರೇರಣೆಯಿಂದ ರಾಜೀನಾಮೆ ನೀಡಿದ್ದೇವೆ ಎಂದು ನಮ್ಮ ಶಾಸಕರು ಜಗತ್ತಿಗೆ ಕೇಳಿಸುವಂತೆ ಘಂಟಾಘೋಷವಾಗಿ ಹೇಳಿದ ಬಳಿಕವೂ ಆಗಿನ ಸ್ಪೀಕರ್ ರಾಜೀನಾಮೆಗೆ ಕಾರಣ ಕೇಳಿದರು. ನಾವು ಸುಪ್ರೀಂಗೆ ಸಲ್ಲಿಸಿರುವ ಪ್ರಮಾಣಪತ್ರವೂ ಸುಳ್ಳು ಎಂದು ಸ್ಪೀಕರ್ ಹೇಳುತ್ತಾರೆ. ನೀವು ಮುಂಬಯಿಗೆ ಹೋಗಿದ್ದೇಕೆ ? ರಾಜೀನಾಮೆಗೆ ಪ್ರಚೋದನೆ ಏನು ಎಂದು ಶಾಸಕರನ್ನು ಕೇಳುವ ಮೂಲಕ ಹೆಡ್ ಮಾಸ್ಟರ್ ರೀತಿ ವರ್ತಿಸಿದ್ದಾರೆ.

- **ಮುಕುಲ್ ರೋಹಟಗಿ** ಅನರ್ಹ ಶಾಸಕರ ಪರ ವಾದ

ರಾಜಕೀಯ ಪಕ್ಷ ಬದಲಿಸುವುದು ಪಾಪವೂ ಅಲ್ಲ, ಅಪರಾಧವೂ ಅಲ್ಲ. ಪಕ್ಷವನ್ನು ತಿರಸ್ಕರಿಸುವುದು ಪಕ್ಷಾಂತರ ಹೇಗಾಗುತ್ತದೆ? ಬಂಡಾಯ ಏಳುವುದು ಯಾವುದೇ ಪ್ರಜಾಪ್ರಭುತ್ವದ ಬುನಾದಿ. ಸ್ಪೀಕರ್ ಆದವರು ಸದನದ ಮುಖ್ಯಸ್ಥರೇ ಹೊರತು, ರಾಜಕೀಯ ಪಕ್ಷದ ಮುಖ್ಯಸ್ಥರಲ್ಲ.

-**ಸಿ. ಎ. ಸುಂದರಂ** ಅನರ್ಹ ಶಾಸಕ ಸುಧಾಕರ್ ಪರ ವಕೀಲ

### ಅನರ್ಹರಿಗೆ ನಿರಾಳ ಯಾವಾಗ?

- ಗುರುವಾರ ಅಥವಾ ಶುಕ್ರವಾರ ಸುಪ್ರೀಂ ಕೋರ್ಟ್‌ನಿಂದ ಮಧ್ಯಂತರ ಪರಿಹಾರ
- ಸ್ಪೀಕರ್ ಆದೇಶಕ್ಕೆ ತಡೆ, ಸ್ಪರ್ಧೆಗೆ ಅವಕಾಶ
- ಸ್ಪೀಕರ್ ಆದೇಶ ವಿಚಾರಣೆ ಮುಂದಕ್ಕೆ, ಚುನಾವಣೆ ಸ್ಪರ್ಧೆಗೆ ಮಾತ್ರ ಅವಕಾಶ
- ಬಿಜೆಪಿಯ ಸದಸ್ಯತ್ವ ಪಡೆದು ನಾಮಪತ್ರ ಸಲ್ಲಿಕೆ
- ಈಗಿನ ಸ್ಪೀಕರ್‌ಗೆ ರಾಜೀನಾಮೆ ಸಲ್ಲಿಸಿ ಎಂದು ಚುನಾವಣೆ ಮುಂದೂಡಿಕೆ

### ಅನರ್ಹರಿಗೆ ಟೆನ್ಶನ್ ಯಾವಾಗ?

- ಅಂತಿಮ ಆದೇಶ ಸೋಮವಾರಕ್ಕೆ ಮುಂದೂಡಿಕೆ
- ಸೋಮವಾರ ಅಂತಿಮ ದಿನವಾದ್ದರಿಂದ ತಾವು ನಾಮಪತ್ರ ಸಲ್ಲಿಸಬೇಕೋ, ಕುಟುಂಬದವರನ್ನು ಕಣಕ್ಕಿಳಿಸಬೇಕೋ ಎಂಬ ಗೊಂದಲ
- ಅನರ್ಹಗೊಳಿಸಿದ್ದ ಸ್ಪೀಕರ್ ಕ್ರಮ ಸರಿ ಎಂಬ ತೀರ್ಪು ಹೊರಬಿದ್ದರೆ ಆಪತ್ತು
- ಮಧ್ಯಂತರ ಪರಿಹಾರ ನಿರಾಕರಿಸಿ ವಿಚಾರಣೆ ಮುಂದೂಡಿದರೆ ಗೊಂದಲ.